# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 208/2018

| ಸಿಡಬ್ಲ್ಯೂ | 8 | ಪಿಡಬ್ಲ್ಯೂ | 6 |
|---|---|---|---|

ಸಾಕ್ಷಿದಾರರ ಹೆಸರು : ಶ್ರೀ ಮಲ್ಲಿಕಾರ್ಜುನಗೌಡ

ತಂದೆ ಹೆಸರು : ದಾನನಗೌಡ

ವಯಸ್ಸು : 55 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 03.06.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಬಳಗನೂರು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

17.06.201 ರಂದುಕೂ ಲಿಅವರ ನ್ನು ಕೇಳಲು ಕುಬೇರಗೌಡರ ಮನೆಯ ಹತ್ತಿರ ಹೋದೆ. ಚಂದ್ರಪ್ಪ, ಬಸವರಾಜ, ಕೊಟ್ರೇಶಪ್ಪ, ಶ್ರೀಮಾತೆಮ್ಮ ಬಂದು ಸಿದ್ದಮ್ಮನ ಹೊಡೆಯಲು ಹತ್ತಿದದರು. ಚಂದ್ರಪ್ಪ ಕುಡುಗೋಲು ಹಿಡಿದುಕೊಂಡು ಕುಬೇರಗೌಢನಿಗೆ ಹೊಡೆಯಲು ಹೋದರು. ಕೊಟ್ರೇಶಪ್ಪ ಮೇಘರಾಜನಿಗೆ ಹೊಡೆಯಲು ಹೋದರು. ಹೊಡೆಯಬೇಡ ಅಂತಾ ನಾವು ಬಿಡಿಸಿದೆವು. ಕುಬೇರಗೌಡನಿಗೆ ಗಾಯ ಆಯಿತು. ಅಂಬಿಕಾಗೆ ಕಿವಿಯಲ್ಲಿ ರಕ್ತ ಬಂದಿತು, ಮೇಘರಾಜಗೆ ಒಳನೋವಾಯಿತು. ಸಿದ್ದಮ್ಮನಿಗೆ ತಲೆಗೆ ಹೊಡೆತ ಬಿದ್ದಿತ್ತು. ಸಾಯುವ ಹಾಗೆ ಹೊಡೆಯತ್ತೇವೆ ಅಂತಾ ಬೆದರಿಸಿರುತ್ತಾರೆ. ಅವರನ್ನು ಚಿಕಿತ್ಸೆಗೆ ಹರಪನಹಳ್ಳಿ ಆಸ್ಪತ್ರೆಗೆ ಕಳುಹಿಸಿದೆವು. ನಾನು, ಸಂತೋಷ ಮತ್ತು ಕುಬೇರಪ್ಪ ಗಲಾಟೆ ಬಿಡಿಸಿರುತ್ತೇವೆ. ನ್ಯಾಯಾಲಯದ ಮುಂದಿರುವ ಮು.ಮಾ.1 ಕಣಗದಿಂದಲೇ ಹಲ್ಲೆ ಮಾಡಿರುತ್ತಾರೆ. ಆರೋಪಿತರನ್ನು ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಜಿ.ಬಿ. ವಕೀಲರಿಂದಃ-**

(ಪಾಟೀ ಸವಾಲಿಗೆ ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 208/2018

| | | | |
|---|---|---|---|
| ಸಿಡಬ್ಲ್ಯೂ | 11 | ಪಿಡಬ್ಲ್ಯೂ | 5 |

ಸಾಕ್ಷಿದಾರರ ಹೆಸರು : ಡಾ॥ ಭಾನುಪ್ರಸಾದ್ ಬಿ.ಎಲ್.

ತಂದೆಯ ಹೆಸರು : ಭೈರಪ್ಪ

ವಯಸ್ಸು : 36 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 03.06.2026.

ಉದ್ಯೋಗ : ವೈದ್ಯಾಧಿಕಾರಿ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.

ವಾಸ ಸ್ಥಳ : ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ದಿನಾಂಕ 17.06.2018 ರಂದು ಕುಬೇರಗೌಡ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಎಡಗೈ ತೋಳಿನ ಮೇಲೆ 2 X 2 ಸೆ.ಮೀ. ಉದ್ದ ಹರಿದ ಗಾಯ, ಎಡ ತೋಳಿನ ಮೇಲೆ ತೆರಚಿದ ಗಾಯ ಇತ್ತು. ಸದರಿಯವರಿಗೆ ಆದ ಗಾಯಗಳಲ್ಲಿ ಎರಡು ಗಾಯಗಳು ಗಾಯ ಸಾಮಾನ್ಯ ಸ್ವರೂಪದ್ದು ಆಗಿತ್ತು. ಮೊಂಡಾದ ವಸ್ತುವಿನಿಂದ ಹಲ್ಲೆ ಮಾಡಿದರೆ ಈ ರೀತಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ 3 ಎಂದು, ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು.

2. ದಿನಾಂಕ 17.06.2018 ರಂದು ಸಿದ್ದಮ್ಮ ಗಂಡ ನಾರನಗೌಡ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಹಣೆ ಮೇಲೆ 2 X 3 ಸೆ.ಮೀ. ಉದ್ದ ಹರಿದ ಗಾಯ ಇತ್ತು. ಸದರಿಯವರಿಗೆ ಆದ ಗಾಯ ಸಾಮಾನ್ಯ ಸ್ವರೂಪದ್ದು ಆಗಿತ್ತು. ಮೊಂಡಾದ ವಸ್ತುವಿನಿಂದ ಹಲ್ಲೆ ಮಾಡಿದರೆ ಈ ರೀತಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ 4 ಎಂದು, ಸಾಕ್ಷಿ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

3. ದಿನಾಂಕ 17.06.2018 ರಂದು ಮೇಘರಾಜ ತಂದೆ ನಾರನಗೌಡ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಮುಖದ ಮೇಲೆ ಕೆನ್ನೆಯ ಬಳಿ ನೋವಿನ ಗಾಯ ಇತ್ತು. ಸದರಿಯವರಿಗೆ ಆದ ಗಾಯ ಸಾಮಾನ್ಯ ಸ್ವರೂಪದ್ದು ಆಗಿತ್ತು. ಮೊಂಡಾದ ವಸ್ತುವಿನಿಂದ ಹಲ್ಲೆ ಮಾಡಿದರೆ ಈ ರೀತಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ 5 ಎಂದು, ಸಾಕ್ಷಿ ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು.

4. ದಿನಾಂಕ 17.06.2018 ರಂದು ಶ್ರೀಮತಿ ಅಂಬಿಕ ಗಂಡ ಮೇಘರಾಜ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಎಡ ಕಿವಿಯ ಮೇಲೆ ತೆರಚಿದ ಗಾಯ, ಕುತ್ತಿಗೆಯ ಮೇಲೆ ತೆರಚಿದ ಗಾಯ ಇತ್ತು. ಸದರಿಯವರಿಗೆ ಆದ ಗಾಯಗಳಲ್ಲಿ ಎರಡು ಗಾಯಗಳು ಗಾಯ ಸಾಮಾನ್ಯ ಸ್ವರೂಪದ್ದು ಆಗಿತ್ತು. ಮೊಂಡಾದ ವಸ್ತುವಿನಿಂದ ಹಲ್ಲೆ ಮಾಡಿದರೆ ಈ ರೀತಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ 6 ಎಂದು, ಸಾಕ್ಷಿ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಜಿ.ಬಿ. ವಕೀಲರಿಂದಃ-</u>

ರೈತರು ಕೆಲಸ ಮಾಡುವಾಗ ಗಟ್ಟಿಯಾದ ವಸ್ತು ತಾಗಿದರೂ ಮೇಲ್ಕಂಡಂತಹ ಗಾಯಗಳು ಆಗಬಹುದು ಎಂದರೆ ಸರಿ. ಚೂಪಾದ ಕಟ್ಟಿಗೆ ತಾಗಿದರೂ ಆಗಬಹುದು ಎಂದರೆ ಮೊಂಡಾದ ವಸ್ತುವಿನಿಂದ ಆಗಬಹುದು. ಮೆಡಿಕಲ್ ಮ್ಯಾನ್ಯುಯಲ್ ಪ್ರಕಾರ ಗಾಯಾಳುವಿನ ಎರಡು ಗುರುತಿನ ಚಿಹ್ನೆಗಳನ್ನು ನಮೂದಿಸಬೇಕು ಎಂದರೆ ಸರಿ. ನಾನು ನೀಡಿದ ಗಾಯದ ಪ್ರಮಾಣಪತ್ರಗಳಲ್ಲಿ ಗುರುತಿನ ಚಿಹ್ನೆಗಳನ್ನು ನಮೂದಿಸಿಲ್ಲ ಎಂದರೆ ಸರಿ. ಗಾಯದ ಆಕಾರ,

ಅವಧಿ, ಬಣ್ಣ, ಎಂ.ಎಲ್.ಸಿ. ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿ. ಒಂದೇ ಸಮಯದಲ್ಲಿ ಮೂರು ಜನರನ್ನು ಪರೀಕ್ಷೆ ಮಾಡಲು ಆಗುವುದಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆಯ ಮೇರೆಗೆ ನಿ.ಪಿ.3 ರಿಂದ ನಿ.ಪಿ.6 ಕೊಟ್ಟಿದ್ದೇನೆ ಎಂದರೆ ಸರಿ. ಮೇಘರಾಜ ಆಗಿರುವ ಗಾಯ ಕಣ್ಣಿಗೆ ಕಾಣುವ ಗಾಯ ಅಲ್ಲ ಎಂದರೆ ಸರಿ. ಮು.ಮಾ.1 ರಿಂದ ಹಲ್ಲೆ ಮಾಡಿದರೆ ಬಾಸುಂಡೆ ಬರುತ್ತದೆ, ಹರಿದ ದೊಡ್ಡ ಗಾಯ ಆಗುತ್ತದೆ ಎಂದರೆ ಬಲವಾಗಿ ಹೊಡೆದರೆ ಆಗುತ್ತದೆ. ಮೇಘರಾಜಗೆ ಒಂದೇ ಗಾಯ ಆಗಿದ್ದರೂ ಎರಡು ಗಾಯ ಆಗಿದೆ ಅಂತಾ ನಮೂದಿಸಿದ್ದೇನೆ ಎಂದರೆ ಸರಿ. ಸಿದ್ದಮ್ಮನ ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ಆಳ, ಆಕಾರ, ಬಣ್ಣ, ಅವಧಿ ನಮೂದು ಮಾಡಿಲ್ಲ ಎಂದರೆ ಸರಿ. ಸಿದ್ದಮ್ಮನಿಗೆ ಒಂದೇ ಗಾಯ ಆಗಿದ್ದರೂ ಎಲ್ಲಾ ಗಾಯಗಳು ಸಾಮಾನ್ಯ ಆಗಿದೆ ಅಂತಾ ನಮೂದಿಸಿದ್ದೇನೆ ಎಂದರೆ ಸರಿ. ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುಗಳು ಆಸ್ಪತ್ರೆಗೆ ಸ್ವತಃ ಆಸ್ಪತ್ರೆಗೆ ಬಂದಿದ್ದರು ಎಂದರೆ ಸರಿ.

ಮರು ವಿಚಾರಣೆ ಇಲ್ಲಾಃ-
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.